


## ವಿಚಾರಾತ್ಮಕ ಲೇಖನ

'ಲಿಂಗ ಸಮಾನತೆ ಇದೆಯೇ?' ನಡಹಳ್ಳಿ ವಸಂತ್ ಅವರ ಮುಖಪುಟ ಲೇಖನ (ಸುಧಾ, ಜ. 12) ವಿಚಾರಾತ್ಮಕವಾಗಿದೆ. ಗಂಡು ಮಕ್ಕಳಿಗೂ ಕ್ಷಮೆ, ತಾಳ್ಮೆ, ಸಹನೆ, ಮಾನ ಮರ್ಯಾದೆಗಳ ಕುರಿತು ಪೋಷಕರು ಅತ್ಯವಶ್ಯಕವಾಗಿ ತಿಳಿಸಿಕೊಡಬೇಕಾಗಿದೆ. ಹೆಣ್ಣು–ಗಂಡುಗಳ ಬಗ್ಗೆ ಸಮಾಜದಲ್ಲಿರುವ ಅಲಿಖಿತ ನಿಯಮ ಬದಲಾಗಬೇಕಾಗಿದೆ.

–ಸು.ವಿಜಯಲಕ್ಷ್ಮಿ ಶಿವಮೊಗ್ಗ, ಎಂ.ಎಸ್. ಧರ್ಮೇಂದ್ರ ದೊಡ್ಡಮಗ್ಗೆ, ಗಾಣಧಾಳು ರಾಮಣ್ಣ ಚಿತ್ರದುರ್ಗ, ಮುಕುಂದ ಹೆರಕಲ್ಲ ಕಲಬುರಗಿ, ಮಹಾವೀರ ಕಾಸರ ಶಿವಮೊಗ್ಗ, ಡಾ.ಕೆ.ಕೆ. ಜಯಚಂದ್ರಗುಪ್ತ ಹಾಸನ

## ಚಿಂತನಾರ್ಹ

'ನಿಮ್ಮೊಡನೆ'ಯಲ್ಲಿ 'ಹಿಂದಿ, ಸಂಸ್ಕೃತ ಹೇರಿಕೆ ಸರಿಯಲ್ಲ' (ಬಿ.ಎಂ. ಹನೀಫ್) ಚಿಂತನಾರ್ಹ. ಈ ಹೇರಿಕೆ ಮಕ್ಕಳಿಗೆ 'ಹಿಂಸೆ'ಯಾಗುತ್ತದೆ. ಸರ್ಕಾರವೇ ಈ ಹೇರಿಕೆಯನ್ನು ಹಿಂತೆಗೆದುಕೊಳ್ಳುವಂತೆ ಮಾಡಬೇಕಿದೆ.

–ಹುರುಕಡ್ಲಿ ಶಿವಕುಮಾರ ಬಾಚಿಗೊಂಡನಹಳ್ಳಿ, ಎಂ.ಮೃತ್ಯುಂಜಯಪ್ಪ ಚಿತ್ರದುರ್ಗ

## ವಾದ ಒಪ್ಪುವಂಥದ್ದಲ್ಲ

'ಹಿಂದಿ ಭಾಷೆ ಹೇರಿಕೆ ಸರಿಯಲ್ಲ' ಎಂಬ ವಾದವನ್ನು ನಾನು ಒಪ್ಪುವುದಿಲ್ಲ. ಸಂಸ್ಕೃತ ಭಾಷೆ ಕಲಿಯುವ ಬಗ್ಗೆ ಈ ವಾದ ಸ್ವಲ್ಪಮಟ್ಟಿಗೆ ಅನ್ವಯವಾಗಬಹುದು. ಆದರೆ ಹಿಂದಿ ಕಲಿಕೆ ಎಲ್ಲರಿಗೂ ಅವಶ್ಯಕ. ರೈಲುಗಳಲ್ಲಿ ರಾಜ್ಯಗಳ ಮಧ್ಯೆ ಪ್ರಯಾಣಿಸುವಾಗ ಹಿಂದಿ ಗೊತ್ತಿಲ್ಲದೇ ಹೋದರೆ ಫಜೀತಿ ಉಂಟಾಗುತ್ತದೆ. ಉತ್ತರದ ರಾಜ್ಯಗಳಲ್ಲಿ ದಕ್ಷಿಣದ ಭಾಷೆ ಕಲಿಯಲು ಸೂಕ್ತ ಸೌಲಭ್ಯ ಹಾಗೂ ವಾತಾವರಣವಿಲ್ಲ. ಹಾಗಿದ್ದೂ ನವೋದಯ ಶಾಲೆಗಳಲ್ಲಿ ಇಂಥ ಪ್ರಯತ್ನ ಮಾಡಲಾಗಿದೆ. ಹೀಗಾಗಿ ಹಿಂದಿ ಕಲಿಕೆಗೆ ವಿರೋಧ ಬೇಡ.

–ಕೆ. ಪ್ರಕಾಶ್ ಬಾಳೆಹೊನ್ನೂರು

## ಕಥೆ ಚೆನ್ನಾಗಿದೆ

'ಮರೆಯಾದ ಮನದನ್ನೆ' ಕಥೆ (ಗುರುರಾಜ್ ರಾಮನಗರ) ಚೆನ್ನಾಗಿದೆ.

–ಎಸ್.ವಿಜಯಕುಮಾರಿ ಬೆಂಗಳೂರು, ಕೌಸಲ್ಯಾ ಮೈಸೂರು, ರಾಜಶೇಖರ ಹಾದಿಮನಿ ಧಾರವಾಡ

## ದಿಕ್ಸೂಚಿಯಂತಿದೆ

'ಶಾಲಾ ಪ್ರವಾಸ ಹೇಗಿರಬೇಕು?' (ಸೌಮ್ಯ ಬೀನಾ) ಶಿಕ್ಷಕರಿಗೆ ದಿಕ್ಸೂಚಿಯಂತಿದೆ.

–ಸುಂದರ್ ಬೆಂಗಳೂರು, ಅಕ್ಷಯನಗರ ಗೋಪಾಲರಾವ್ ಬೆಂಗಳೂರು, ನಾರಾಯಣಯಾಜಿ ಶಿರಾಲಿ

## ನೈಜ ಚಿತ್ರಣ

'ಇಲ್ಲಿರಲಾರೆ, ಅಲ್ಲಿಗೆ ಹೋಗಲಾರೆ' (ಸವಿತಾ ಶಾಂತಪ್ರಿಯ) ಲೇಖನದಲ್ಲಿನ ವಿಚಾರಗಳು ಅರ್ಥಪೂರ್ಣವಾಗಿವೆ. ಇಂದಿನ ದಿನದಲ್ಲಿ ವಿಶ್ವದೆಲ್ಲೆಡೆ ಕಂಡುಬರುತ್ತಿರುವ ವಿದ್ಯಮಾನದ ನೈಜ ಚಿತ್ರಣ ಲೇಖನದಲ್ಲಿದೆ.

–ಕೃಷ್ಣ ಜೋಶಿ ಧಾರವಾಡ, ಮಧುರಾ ಸುಬ್ರಹ್ಮಣ್ಯ ಬೆಂಗಳೂರು

## ಮಾಹಿತಿಪೂರ್ಣ

'ಸೆಲೆಬ್ರಿಟಿ'ಯಲ್ಲಿ 'ರಾಜ್ಯಸಭೆಗೆ ವಿದಾಯ' (ಹನಿ) ಬರಹದಲ್ಲಿ ಮಿಥುನ್ ಚಕ್ರವರ್ತಿ ಕುರಿತು ಹೆಚ್ಚಿನ ಮಾಹಿತಿ ನೀಡಿತು. ಚಿತ್ರವೂ ಚೆನ್ನಾಗಿದೆ.

–ರತ್ನಾಕರ ಹೆಗಡೆಕಟ್ಟೆ ಮೂಡಬಿದ್ರಿ

## ಸೋನಾಕ್ಷಿ ಚಿತ್ರ

ಬಾಲಿವುಡ್ ಅಂಕಣದಲ್ಲಿ 'ಸೋನಾಕ್ಷಿಗೆ ಕಲ್ಯಾಣವಂತೆ!' ಬರಹದಲ್ಲಿ ಸೋನಾಕ್ಷಿಯ ಬರಲಿರುವ ಚಿತ್ರ 'ಇಟ್ಟೆಫಾಕ' ಎಂದಿದೆ. ಅದು ಇತ್ತೆಫಾಖ್ ಆಗಬೇಕು.

–ಮುಕುಂದ ಹೆರಕಲ್ಲ ಕಲಬುರಗಿ

## ಅಮೆರಿಕದಲ್ಲಿ 'ಸುಧಾ'

ಸಂಗೀತ ಕಾರ್ಯಕ್ರಮ ಒಂದಕ್ಕೆ ಹೋಗಿದ್ದಾಗ ಉಸ್ತಾದ್ ಬಾಲೇಖಾನ್ ಅವರ ಪುತ್ರ ಹಫೀಜ್ ಖಾನ್ ಸಿಕ್ಕಿದ್ದರು. ಯಾರೋ ಪರಿಚಯ ಮಾಡಿಸಿದರು. ನಾನು ಹೇಳಿದೆ, ನನ್ನ ಲೇಖನ 'ಸಂಗೀತ ಮತ್ತು ಧರ್ಮ' ಸುಧಾ ಪತ್ರಿಕೆಯಲ್ಲಿ ಪ್ರಕಟವಾಗಿದ್ದು, ತಮ್ಮ ಹೆಸರಿನಿಂದಲೇ ಲೇಖನ ಪ್ರಾರಂಭವಾಗಿದೆ ಎಂದು. ಅವರ ಪ್ರತಿಕ್ರಿಯೆ ಹೀಗಿತ್ತು:

'ಸೆಪ್ಟೆಂಬರ್ 24 ರ ಸಂಚಿಕೆ ಅದು. ನಾನು ಅಮೆರಿಕದಲ್ಲಿ ಇದ್ದೆ. ಅಂದೇ ನನ್ನ ಕಛೇರಿ ಏರ್ಪಾಡಾಗಿತ್ತು. ವ್ಯವಸ್ಥಾಪಕರ ಕೈಗೆ ಆ ಸಂಚಿಕೆ ಸಿಕ್ಕಿದ್ದು, ಕಛೇರಿ ಪ್ರಾರಂಭವಾಗುವುದಕ್ಕೆ ಮುಂಚೆ ಪೂರ್ತಿ ಲೇಖನವನ್ನು ವೇದಿಕೆಯ ಮೇಲೆ ಓದಿದರು'.

ಸುಧಾ ಇಷ್ಟು ಜನಪ್ರಿಯವಾಗಿದ್ದು, ಅಷ್ಟು ದೂರದ ದೇಶದಲ್ಲಿ ಅದೇ ತಾರೀಕಿನಂದು ಕನ್ನಡಿಗರನ್ನು ತಲುಪಿದ್ದು, ಅದನ್ನು ಅವರು ಓದಿದ್ದು ಎಲ್ಲವನ್ನೂ ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಅಂತೆಯೇ ಸಂತೋಷವೂ ಆಯಿತು.

– ಬೃಂದಾ ರಾವ್ ಬೆಂಗಳೂರು



ಸಂಧಿಲಿನ್
SANDHILIN सन्धिलिन
ಗಂಟು ನೋವು,
ಬೆನ್ನು ನೋವು,
ಮಾಂಸ ಖಂಡಗಳ ಸೆಳೆತ,
ನರ, ವಾತ ಸಂಬಂಧಿ
ನೋವಿಗೆ
ಶೀಘ್ರ
ಪರಿಣಾಮಕಾರಿ
CLINICALLY PROVED


◆ಜಿಡ್ಡು ರಹಿತ 'ಸಂಧಿಲಿನ್' ಎಣ್ಣೆಯನ್ನು ಆಯುರ್ವೇದದ ಋಷಿಮುನಿಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
◆ಇದು ಗಂಟುನೋವು, ಬೆನ್ನುನೋವು, ಉಳುಕು, ಮಾಂಸ ಖಂಡಗಳ ಸೆಳೆತ, ನರ, ವಾತ ಸಂಬಂಧಿ ನೋವುಗಳಿಗೆ ಪರಿಣಾಮಕಾರಿ.
◆ತ್ವಚೆಗೆ ಹಿತಕರವಾಗಿದ್ದು ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.
ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph / Fax: 0820 - 2520852
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ
ಉತ್ಕೃಷ್ಟ ಗುಣಮಟ್ಟದ ಉತ್ಪನ್ನ